॥ ಶ್ರೀ ಮಧ್ವನಾಮ ॥

ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ ।
ಅಖಿಲ ಗುಣಸದ್ಧಾಮ ಮಧ್ವನಾಮಾ ॥ ಪ ॥

ಆವ ಕಚ್ಛಪರೂಪದಿಂದಲ್ಯಂಡೋದಕದಿ ।
ಓವಿ ಧರಿಸಿಹ ಶೇಷಮೂರುತಿಯನು ॥
ಆವನ ಬಳಿಪಿಡಿದು ಹರಿಯ ಸುರರೈದುವರು ।
ಆ ವಾಯು ನಮ್ಮ ಕುಲಗುರುರಾಯನು ॥ ೧ ॥

ಆ ವಾತನು ದೇಹದಿರೆ ಹರಿಯು ತಾ ನೆಲೆಸಿರುವ ।
ಆ ವಾತನು ತೊಲಗೆ ಹರಿ ತಾ ತೊಲಗುವ ॥
ಆ ವಾತನು ದೇಹದೊಳ ಹೊರಗೆ ನಿಯಾಮಕನು ।
ಆ ವಾಯು ನಮ್ಮ ಕುಲಗುರುರಾಯನು ॥ ೨ ॥

ಕರಣಾಭಿಮಾನಿದಿವಿಜರು ದೇಹವನು ಬಿಡಲು ।
ಕುರುಡ ಕಿವುಡನು ಮೂಕನೆಂದೆನಿಸುವ ॥
ಪರಮ ಮುಖ್ಯಪ್ರಾಣ ತೊಲಗಲಾದೇಹವನು ।
ಅರಿತು ಪೆಣನೆಂದು ಪೇಳ್ವರು ಬುಧಜನಾ ॥ ೩ ॥

ಸುರರೊಳಗೆ ನರರೊಳಗೆ ಸರ್ವಭೂತಗಳೊಳಗೆ ।
ಪರತನೆನಿಸಿ ನೇಮದಿ ನೆಲೆಸಿಹ ॥
ಹರಿಯನಲ್ಲದೆ ಬಗೆಯ ಅನ್ಯರನು ಲೋಕದೊಳು ।
ಗುರುಕುಲತಿಲಕ ಮುಖ್ಯಪವಮಾನನು ॥ ೪ ॥

ತೇತೆಯಿಲಿ ರಘುಪತಿಯ ಸೇವೆ ಮಾಡುವೆನೆಂದು ।
ವಾತಸುತ ಹನುಮಂತನೆಂದೆನಿಸಿದ ॥
ಪೋತಭಾವದಿ ತರಣಿಬಿಂಬಕ್ಕೆ ಲಂಘಿಸಿದ ।
ಈ ತಗೆಣೆ ಯಾರು ಮೂರ್ಲೋಕದೊಳಗೆ ॥ ೫ ॥

ತರಣಿಗಭಿಮುಖವಾಗಿ ಶಬ್ದ ಶಾಸ್ತ್ರದ ಪಠಿಸಿ ।
ಉರವಣಿಸಿ ಹಿಂದೆ ಮುಂದಾಗಿ ನಡೆದ ॥
ಪರಮ ಪವಮಾನಸುತ ಉದಯಾಸ್ತಶೈಲಗಳ ।
ಭರದಿ ಐದಿದ ಈತಗುಪಮೆಯುಂಟೆ ॥ ೬ ॥

ಅಖಿಲ ವೇದಗಳ ಸಾರುವ ಮುನ್ನ ತಾ ।
ನಿಖಿಳ ವ್ಯಾಕರಣ ಶಾಸ್ತ್ರವನು ಪೇಳೆ ॥
ಮುಖದಲ್ಲಿ ಕಿಂಚಿದಪಶಬ್ದ ಇವಗಿಲ್ಲೆಂದು ।
ಮುಖ್ಯ ಪ್ರಾಣನನು ರಾಮನನುಕರಿಸಿದ ॥ ೭ ॥

ತರಣಿಸುತನನು ಕಾಯ್ದು ಶರಧಿಯನು ನೆರೆ ದಾಟಿ ।
ಧರಣಿಸುತೆಯಳ ಕಂಡು ದನುಜರೊಡನೆ ॥
ಭರದಿ ರಣವನು ಮಾಡಿ ಗೆಲಿದು ದಿವ್ಯಾಸ್ತ್ರಗಳ ।
ಉರುಹಿ ಲಂಕೆಯಾ ಬಂದ ಹನುಮಂತನು ॥ ೮ ॥

ಹರಿಗೆ ಚೂಡಾರತ್ನವಿತ್ತು ಹರಿಗಳ ಕೂಡಿ ।
ಶರಧಿಯನು ಕಟ್ಟಿ ಬಹು ರಕ್ಕಸರನು ॥
ಒರಸಿ ರಣದಲ್ಲಿ ದಶಶಿರನ ಹುಡಿಗಟ್ಟಿ ತಾ ।
ಮೆರೆದ ಹನುಮಂತ ಬಲವಂತ ಧೀರಾ ॥ ೯ ॥

ಉರಗಬಂಧಕೆ ಸಿಲುಕಿ ಕಪಿವರರು ಮೈಮರೆಯೆ ।
ತರಣಿಕುಲತಿಲಕನಾಜ್ಞೆಯ ತಾಳಿ ತಾ ॥
ಗಿರಿಸಹಿತ ಸಂಜೀವನವ ಕಿತ್ತಿ ತಂದಿತ್ತ ।
ಸುರನರರೊಳು ಸರಿಯುಂಟೆ ಹನುಮಂತನಿಗೆ ॥ ೧೦ ॥

ವಿಜಯ ರಘುಪತಿಯೊಲಿಸಿ ಧರಣಿಸುತೆಯಳನೀತ ।
ಭಜಿಸಿ ಮೌಕ್ತಿಕದ ಹಾರವನು ಪಡೆದ ॥
ಅಜಪದವಿ ರಾಮು ಕೊಡ ಬರಲು ಹನುಮಂತ ।
ನಿಜ ಭಕುತಿಯನೆ ಬೇಡಿ ವರವ ಪಡೆದ ॥ ೧೧ ॥

ಆ ಮಾರುತನೆ ಭೀಮನೆನಿಸಿ ದ್ವಾಪರಯುಗದಿ ।
ಸೋಮ ಕುಲದಲಿ ಜನಿಸೆ ಪಾರ್ಥರೊಡನೆ ॥
ಭೀಮ ವಿಕ್ರಮ ರಕ್ಕಸರನು ಮುರಿದಿಕ್ಕಿದ ।
ಆ ಮಹಿಮ ನಮ್ಮ ಕುಲಗುರುರಾಯನು ॥ ೧೨ ॥

ಕರದಿಂದ ಶಿಶುಭಾವನಾದ ಭೀಮನ ಬಿಡಲು ।
ಗಿರಿಯೊಡೆದು ಶತಶೃಂಗವೆಂದೆನಿಸಿತು ॥
ಹರಿಗಳನು ಹರಿಗಳಿಂ ಕರಿಗಳನು ಕರಿಗಳಿಂ ।
ಅರೆದ ವೀರನಿಗೆ ಸುರನರರು ಸರಿಯೇ ॥ ೧೩ ॥

ಕುರುಪ ಗರಳವನಿಕ್ಕೆ ನೆರೆಯುಂಡು ತೇಗುತಲಿ ।
ಉರಗಗಳ ಮೈಲ್ಪಿಡಲು ಅವನೊರಸಿದ ॥
ಅರಗಿನರಮನೆಯಲಿ ಉರಿಯನಿಕ್ಕಿ ತಾ ಧೀರ ।
ಧರಿಸಿ ಜಾಹ್ನವಿಗೊಯ್ದ ತನ್ನನುಜರ ॥ ೧೪ ॥

ಅಲ್ಲಿದ್ದ ಬಕಹಿಡಿಂಬಕರೆಂಬ ರಕ್ಕಸರ ।
ನಿಲ್ಲದೊರೆಸಿದ ಲೋಕಕಂಟಕರನು ॥
ಬಲ್ಲಿದಸುರರ ಗೆಲಿದು ದ್ರೌಪದಿಯ ಕರವಿಡಿದು ।
ಎಲ್ಲ ಸುಜನರಿಗೆ ಹರುಷವ ಬೀರಿದ ॥ ೧೫ ॥

ರಾಜಕುಲವಜ್ರನೆನಿಸಿದ ಮಾಗಧನ ಸೀಳಿ ।
ರಾಜಸೂಯಯಾಗವನು ಮಾಡಿಸಿದನು ॥
ಆದಿಯಲಿ ಕೌರವರ ಬಲವ ಸವರುವೆನೆಂದು ।
ಮೂಜಗವರಿಯೆ ಕಂಕಣ ಕಟ್ಟಿದ ॥ ೧೬ ॥

ಮಾನನಿಧಿ ದೌಪದಿಯ ಮನದಿಂಗತವನರಿತು ।
ದಾನವರ ಸವರಬೇಕೆಂದು ಬೇಗ ॥
ಕಾನನವ ಪೊಕ್ಕು ಕಿರ್ಮೀರಾದಿಗಳ ತರಿದು ।
ಮಾನಿನಿಗೆ ಸೌಗಂಧಿಕವನಿತ್ತ ॥ ೧೭ ॥

ದುರುಳ ಕೀಚಕನು ದ್ರೌಪದಿದೇವಿ ಚೆಲ್ವಿಕೆಗೆ ।
ಮರುಳಾಗಿ ಕರೆಕರೆಯ ಮಾಡಲವನ ॥
ಗರಡಿಮನೆಯೊಳು ಬರಿಸಿ ಒರೆಸಿ ಅವನನುಜರ ।
ಕುರುಪನಟ್ಟಿದ ಮಲ್ಲಕುಲವ ಸದೆದ ॥ ೧೮ ॥

ವೈರಿ ದುಶ್ಶ್ಯಾಸನನ ತೊಡೆಯ ಮೇಲಡ್ಡಗೆಡಹಿ ।
ವೀರನರಹರಿಯ ಲೀಲೆಯ ತೋರಿದ ॥
ಕೌರವರ ಬಲ ಸವರಿ ವೈರಿಗಳ ನೆಗ್ಗುತ್ತ ।
ಓರಂತೆ ಕೌರವರನ್ನೆಲ್ಲ ತರೆದ ॥ ೧೯ ॥

ಗುರುಸುತನು ಸಂಗರದಿ ನಾರಾಯಣಾಸ್ತ್ರ ಬಿಡೆ ।
ಉರವಣಿಸಿ ಬರಲು ಶಸ್ತ್ರವ ಬಿಸುಡದೆ ॥
ಹರಿಯ ಕೃಪಾಪಡೆದಿದ್ದ ಭೀಮಹುಂಕಾರ ಗೈದು ।
ಎರಗದಲೆ ದಿವ್ಯಾಸ್ತ್ರ ನೆರೆ ಅಟ್ಟಿದ ॥ ೨೦ ॥

ನಾರಿರೋದನ ಕೇಳಿ ಮನಮರುಗಿ ಗುರುಸುತನ ।
ಹಾರ್ಹಿಡಿದು ಶಿರೋರತ್ನ ಕಿತ್ತಿ ತೆಗೆದ ॥
ನೀರೊಳಡಗಿದ್ದು ದುರ್ಯೋಧನನ ಹೊರಗೆಡಹಿ ।
ಊರುದ್ವಯ ತನ್ನ ಗದೆಯಿಂದ ಮುರಿದ ॥ ೨೧ ॥

ಚಂಡವಿಕ್ರಮನ ಗದೆಗೊಂಡು ರಣದೊಳಗೆ ಭೂ ।
ಮಂಡಲದೊಳುದ್ಭವಿಸಿದಖಿಳ ಖಳರ ॥
ಹಿಂಡಿ ಬಿಸುಟಿದ ವೃಕೋದರನ ಪ್ರತಾಪವನು ।
ಕಂಡು ನಿಲ್ಲುವರಾರು ತ್ರಿಭುವನದೊಳು ॥ ೨೨ ॥

ದಾನವರು ಕಲಿಯುಗದೊಳವತರಿಸಿ ಸುಜನರಿಗೆ ।
ವೇನನ ಕುಮತವ ಬೋಧಿಪುದನರಿತು ॥
ಜ್ಞಾನಿ ತಾ ಪವಮಾನ ಭೂತಳದೊಳವತರಿಸಿ ।
ಮಾನನಿಧಿ ಮಧ್ವಾಖ್ಯನೆಂದೆನಿಸಿದ ॥ ೨೩ ॥

ಅರ್ಭಕತನವ ನೀಗಿ ಬದರಿಯಲಿ ಮಧ್ವಮುನಿ ।
ನಿರ್ಭಯದಿ ಸಕಲಶಾಸ್ತ್ರಾರ್ಥ ಪಠಿಸಿ ॥
ಉರ್ವಿಯೊಳು ಆಮ್ನಾಯದ ತತ್ವಮಾರ್ಗವನು ।
ಸರ್ವ ಸುಜನರಿಗೆ ಅರುಹಿದ ವೋದದಿ ॥ ೨೪ ॥

ಸರ್ವೇಶ ಹರಿ ವಿಶ್ವವೆಲ್ಲವೂ ಪುಸಿಯೆಂಬ ।
ದುರ್ವಾದಿಗಳ ಮತವ ನೆರೆ ಖಂಡಿಸಿ ॥
ಸರ್ವೇಶ ಹರಿ ವಿಶ್ವಸತ್ಯವೆಂದರುಹಿದ ।
ಶರ್ವಾದಿಗೀರ್ವಾಣ ಸಂತತಿಯಲಿ ॥ ೨೫ ॥

ಏಕವಿಂಶತಿ ಕುಭಾಷ್ಯಗಳ ಬೇರನು ತರಿದು ।
ಶ್ರೀ ಕರಾರ್ಚಿತನೊಲುಮೆ ಶಾಸ್ತ್ರ ರಚಿಸಿ ॥
ಲೋಕತ್ರಯದೊಳಿದ್ದ ಸುರರು ಆಲಿಸುವಂತೆ ।
ಆ ಕಮಲನಾಭಯತಿನಿಕರಕೊರೆದ ॥ ೨೬ ॥

ಬದರಿಕಾಶ್ರಮಕ್ಕೆ ಪುನರಪಿ ಪೋಗಿ ವ್ಯಾಸಮುನಿ ।
ಪದಕೆರಗಿ ಸಕಲ ವೇದಾರ್ಥಗಳನು ॥
ಪದುಮನಾಭನ ಮುಖದಿ ತಿಳಿದು ಬ್ರಹ್ಮತ್ವ ।
ವೈದಿದ ಮಧ್ವಮುನಿರಾಯಗಭಿನಮಿಪೆನು ॥ ೨೭ ॥

ಜಯ ಜಯತು ದುರ್ವಾದಿಮತತಿಮಿರಮಾರ್ತಂಡ ।
ಜಯ ಜಯತು ವಾದಿಗಜ ಪಂಚಾನನ ॥
ಜಯ ಜಯತು ಚಾರ್ವಾಕಗರ್ವಪರ್ವತಕುಲಿಶ ।
ಜಯ ಜಯತು ಜಗನ್ನಾಥ ಮಧ್ವನಾಥಾ ॥ ೨೮ ॥

ತುಂಗಕುಲಗುರುವರನ ಹೃತ್ಕಮಲದೊಳು ನೆಲೆಸೆ ।
ಭಂಗವಿರದ ಸುಖವ ಸುಜನಕೆಲ್ಲ ॥
ಹಿಂಗದೆ ಕೊಡುವ ಗುರುಮಧ್ವಾಂತರ್ಯಾಮಿ ।
ಶ್ರೀರಂಗವಿಠ್ಠಲನೆಂದು ನೆರೆನಂಬಿರೋ ॥ ೨೯ ॥

ಸೋಮಸೂರ್ಯೋಪರಾಗದಿ ಗೋಸಹಸ್ರಗಳ ।
ಭೂಮಿದೇವರಿಗೆ ಸುರನದಿಯ ತಟದಿ ॥
ಶ್ರೀಮುಕುಂದಾರ್ಪಣವೆನುತ ಕೊಟ್ಟ ಫಲವಕ್ಕು ।
ಈ ಮಧ್ವನಾಮ ಬರೆದೋದಿದವರಿಗೆ ॥ ೩೦ ॥

ಪುತ್ರರಿಲ್ಲದವರು ಸತ್ಪುತ್ರರೈದುವರು ಸ ।
ರ್ವತ್ರದಲಿ ದಿಗ್ವಿಜಯವಾಹುದು ಸದಾ ॥
ಶತ್ರುಗಳು ಬೀಳ್ವರಪಮೃತ್ಯು ಬರಲಂಜುವದು ।
ಸೂತ್ರನಾಮಕನ ಸಂಸ್ಮೃತಿಮಾತ್ರದಿ ॥ ೩೧ ॥

ಶ್ರೀಪಾದರಾಜರು ಸುರಿದ ಮಧ್ವನಾಮ ಸಂ ।
ತಾಪವನು ಕಳೆದು ಸೌಖ್ಯವನೀವುದು ॥
ಶ್ರೀಪತಿ ಜಗನ್ನಾಥವಿಠಲನ ತೋರಿ ಭವ ।
ಕೂಪಾರದಿಂದ ಕಡೆಹಾಯಿಸುವುದು ॥ ೩೨ ॥

॥ ಇತಿ ಶ್ರೀ ಶ್ರೀಪಾದರಾಜ ವಿರಚಿತ ಮಧ್ವನಾಮ ॥